ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	391
ಸದಸ್ಯರ ಹೆಸರು	ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	15-09-2021
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹೋಬಳಿ ಮಟ್ಟದಲ್ಲಿರುವ ಅಟಲ್ ಜೀ ಜನಸ್ನೇಹಿ ಕೇಂದ್ರಗಳೆಷ್ಟು ;	ರಾಜ್ಯದಲ್ಲಿ ಹೋಬಳಿ ಮಟ್ಟದಲ್ಲಿ ಒಟ್ಟು 769 ನಾಡಕಛೇರಿಗಳು, 122 ಫ್ರಂಟ್ ಆಫೀಸ್ ಗಳು ಮತ್ತು 30 ಸ್ಪಂದನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.
ಆ)	ಇಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆ ಎಷ್ಟು;	ಸದರಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಡೇಟಾ ಎಂಟ್ರಿ ಆಪರೇಟರ್ ಗಳ ವಿವರ ಈ ಕೆಳಗಿನಂತಿದೆ.

ರೆಗ್ಯುಲರ್ ಡೇಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆ	ಫ್ರಂಟ್ ಆಫೀಸ್ ಡೇಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆ	ಕಸಬಾ ನಾಡಕಛೇರಿಗಳಲ್ಲಿ ಪಹಣಿ ವಿತರಣೆಯ ಡೇಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆ	ಸ್ಪಂದನ ಡೇಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆ	ಒಟ್ಟು ಡೇಟಾ ಎಂಟ್ರಿ ಆಪರೇಟರ್ ಗಳ ಸಂಖ್ಯೆ
769	98	224	30	1121

ಕ್ರ. ಸಂ.	ಪ್ರಶ್ನೆ	ಉತ್ತರ
ಇ)	ಇವರಿಗೆ ವಿಳಂಬವಾಗಿ ವೇತನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಪರೇಟರ್‌ಗಳಿಗೆ ಹಲವಾರು ತಿಂಗಳುಗಳ ಸಂಭಾವನೆ ಪಾವತಿಯಾಗದೇ ಬಾಕಿ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ. ಈ ಬಗ್ಗೆ ಪರಿಶೀಲಿಸಲಾಗಿ, ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಹೆಸರಿನಲ್ಲಿ ಬಳಕೆದಾರರ ನಿಧಿಯ ಬ್ಯಾಂಕ್ ಖಾತೆಯನ್ನು ತೆರೆಯಲಾಗಿದ್ದು, ಸದರಿ ಖಾತೆಯಲ್ಲಿ ವಿವಿಧ ಪ್ರಮಾಣ ಪತ್ರಗಳ ಸೇವಾ ಶುಲ್ಕದಿಂದ ಸಂಗ್ರಹಣೆಯಾಗುವ ಮೊತ್ತವು ಸದರಿ ಖಾತೆಗಳಲ್ಲಿ ಜಮೆಯಾಗುತ್ತದೆ. ಪ್ರತಿ ಜಿಲ್ಲೆಯಲ್ಲಿ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಜಿಲ್ಲಾಧಿಕಾರಿಗಳ ಹಂತದಲ್ಲಿಯೇ ನೇಮಕಾತಿ ಮಾಡಲು ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿರುತ್ತದೆ. ಅದರಂತೆ, ಜಿಲ್ಲಾಧಿಕಾರಿಗಳೇ ಏಜೆನ್ಸಿಯವರನ್ನು ಆಯ್ಕೆ ಮಾಡಿ ಸದರಿ ಏಜೆನ್ಸಿಯವರ ಮುಖಾಂತರ ಆಪರೇಟರ್ ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ಜಿಲ್ಲಾಧಿಕಾರಿಗಳ ಮೂಲಕವೇ ವೇತನವನ್ನು ಪಾವತಿ ಮಾಡಲಾಗುತ್ತಿದೆ. ಮುಂದುವರೆದು, ಆಪರೇಟರ್‌ಗಳಿಗೆ ಜಿಲ್ಲಾಧಿಕಾರಿಗಳು ನೇಮಿಸಿರುವ ಏಜೆನ್ಸಿಯವರ ಮೂಲಕ ವೇತನ ಪಾವತಿ ಮಾಡಿರುವ ಮಾಹಿತಿಯನ್ನು ಪ್ರತಿ ತಿಂಗಳು ನಿರ್ದೇಶನಾಲಯಕ್ಕೆ ವರದಿ ಮಾಡಲು ಹಾಗೂ ಸದರಿ ಮಾಹಿತಿಯನ್ನು Google Spread Sheet ನಲ್ಲಿ ಸಲ್ಲಿಸಲು ನಿರ್ದೇಶಿಸಲಾಗಿರುತ್ತದೆ. ಆದರೆ, ಜಿಲ್ಲಾಧಿಕಾರಿಗಳಿಂದ ನೇಮಿಸಿರುವ ಏಜೆನ್ಸಿಯವರು ಆಪರೇಟರ್‌ಗಳ ವೇತನಕ್ಕೆ ಸಂಬಂಧಿಸಿದಂತೆ ಹಾಜರಾತಿಯನ್ನು ಹಾಗೂ ಬಿಲ್ಲನ್ನು ಜಿಲ್ಲಾಧಿಕಾರಿಗಳ ಕಛೇರಿಗೆ ವಿಳಂಬವಾಗಿ ಸಲ್ಲಿಸುತ್ತಿರುವುದಾಗಿ ತಿಳಿಸಿರುತ್ತಾರೆ. ರಾಜ್ಯದ ನಾಡಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಡೇಟಾ ಎಂಟ್ರಿ ಆಪರೇಟರ್ ಗಳ ವೇತನ ವಿಳಂಬ ಪಾವತಿಗೆ ಸಂಬಂಧಿಸಿದಂತೆ ಜಿಲ್ಲಾ ಸಮಾಲೋಚಕರುಗಳೊಂದಿಗೆ ಚರ್ಚಿಸಲು ನಿರ್ದೇಶಕರ ಅಧ್ಯಕ್ಷತೆಯಲ್ಲಿ ಕಾಲ

		ಕಾಲಕ್ಕೆ ವೀಡಿಯೋ ಕಾನ್ಫರೆನ್ಸ್ ಸಭೆಗಳನ್ನು ನಡೆಸಲಾಗಿದ್ದು, ಸದರಿ ಸಭೆಗಳಲ್ಲಿ ಜಿಲ್ಲೆಯ ಡೇಟಾ ಎಂಟ್ರಿ ಆಪರೇಟರ್‌ಗಳಿಗೆ ವೇತನವನ್ನು ಪಾವತಿಸುವ ಸಂಬಂಧ ಬ್ಯಾಂಕ್ ಖಾತೆಯಲ್ಲಿ ಅನುದಾನದ ಲಭ್ಯತೆಯ ಬಗ್ಗೆ ಬ್ಯಾಂಕ್‌ನಿಂದ ಅಥವಾ ನಿರ್ದೇಶನಾಲಯದ ಲೆಕ್ಕ ಶಾಖೆಯಿಂದ ಪರಿಶೀಲಿಸಿ ಪಾವತಿಸಲು ಕ್ರಮ ಕೈಗೊಂಡು, ಸದರಿ ಮಾಹಿತಿಯನ್ನು ನಿರ್ದೇಶನಾಲಯಕ್ಕೆ ತಿಳಿಸಲು, ಒಂದು ವೇಳೆ ಜಿಲ್ಲಾಧಿಕಾರಿಯವರ ಬ್ಯಾಂಕ್ ಖಾತೆಯಲ್ಲಿ ಅನುದಾನ ಲಭ್ಯವಿಲ್ಲದೇ ಇದ್ದಲ್ಲಿ ನಿರ್ದೇಶನಾಲಯಕ್ಕೆ ನಿಗದಿತ ಮಾಹಿತಿಯೊಂದಿಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿರುತ್ತದೆ. (ಆಪರೇಟರ್‌ಗಳ ವೇತನ ಪಾವತಿ ಮಾಡಿದ ವಿವರವನ್ನು ಅನುಬಂಧ-ಎ ರಲ್ಲಿ ಲಗತ್ತಿಸಿದೆ.) ಆದಾಗ್ಯೂ, ಡಾಟಾ ಎಂಟ್ರಿ ಆಪರೇಟರ್‌ಗಳ ಸಂಭಾವನೆಯನ್ನು ಆಧ್ಯತೆ ಮೇಲೆ ಪಾವತಿಸಲು ಅನೇಕ ಪತ್ರ ವ್ಯವಹಾರದಲ್ಲಿ ಹಾಗೂ ವಿಡಿಯೋ ಕಾನ್ಫರೆನ್ಸ್ ನಲ್ಲಿ ತಿಳಿಸಲಾಗಿದ್ದರೂ ಸಹಾ ಆಪರೇಟರ್‌ಗಳ ವೇತನದ ಪಾವತಿಗೆ ಉಂಟಾಗುವ ವಿಳಂಬಕ್ಕೆ ಸಂಬಂಧಿಸಿದ ಅಧಿಕಾರಿ / ನೌಕರರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ ಹಾಗೂ ಆಪರೇಟರ್‌ಗಳ ವೇತನದ ಪಾವತಿಗೆ ಸಂಬಂಧಿಸಿದಂತೆ, ರಾಜ್ಯದ ಎಲ್ಲಾ ಸಮಾಲೋಚಕರಿಗೆ ಪ್ರಮಾಣಿಕೃತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನ ನಡೆಸಲಾಗಿದ್ದು, ಯಾವ ಜಿಲ್ಲೆಯಲ್ಲಿ ಆಪರೇಟರ್‌ಗಳಿಗೆ ಸರಿಯಾಗಿ ವೇತನ ಪಾವತಿಸಲು ಕ್ರಮ ಕೈಗೊಳ್ಳದ ಜಿಲ್ಲೆಯ ಜಿಲ್ಲಾ ಸಮಾಲೋಚಕರ ಸೇವೆಯನ್ನು ಕಡಿತಗೊಳಿಸಲು ತೀರ್ಮಾನಿಸಲಾಗಿರುತ್ತದೆ. ಡಾಟಾ ಎಂಟ್ರಿ ಆಪರೇಟರ್ ವೇತನ ಪಾವತಿಗೆ ಸಂಬಂಧಿಸಿದಂತೆ, ಆಪರೇಟರ್ ಗಳಿಗೆ ಪ್ರತಿ ಮಾಹೆ ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ಮೊತ್ತದಿಂದ ಮೊದಲನೆಯ ಆದ್ಯತೆಯ ಮೇಲೆ ವೇತನ ಪಾವತಿಸಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಾಗಿ ನಿರ್ದೇಶನ ನೀಡಲಾಗಿರುತ್ತದೆ. 2020-21 ನೇ ಸಾಲಿನಲ್ಲಿ ಆಪರೇಟರ್ ಗಳ ವೇತನ ಪಾವತಿಸದೇ ಬಾಕಿ ಇರುವ 12 ಜಿಲ್ಲೆಗಳಿಗೆ ಈಗಾಗಲೇ ಪತ್ರ ಬರೆದು ಸೂಕ್ತ ಸಮಜಾಯಿಷಿಯೊಂದಿಗೆ ಪ್ರಸ್ತಾವನೆ ನೀಡಲು ತಿಳಿಸಲಾಗಿರುತ್ತದೆ.
ಈ)	ಇವರಿಗೆ ಒಂದೊಂದು ಜಿಲ್ಲೆಗಳಲ್ಲಿ ಒಂದೊಂದು ರೀತಿ ವೇತನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಅಟಲ್ ಜೀ ಜನಸ್ನೇಹಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್‌ಗಳ ಸಂಭಾವನೆಯನ್ನು ಏಕ ಮಾದರಿ ಹಾಗೂ ಕನಿಷ್ಠ ವೇತನಕ್ಕೆ ವ್ಯತ್ಯಾಸ ಇದ್ದ ಕಾರಣ, ನಿರ್ದೇಶನಾಲಯದಿಂದ ಒಂದೇ ಮಾದರಿಯ ಟೆಂಡರ್ ದಾಖಲೆಗಳನ್ನು ತಯಾರಿಸಿ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯಿಂದ ಹೊರಡಿಸಲಾದ ವಲಯವಾರು ಆದೇಶದನ್ವಯ, ಪ್ರತಿ ಆಪರೇಟರ್ ಗಳ ಸಂಭಾವನೆ ಗುರುತಿಸಿ, ಸದರಿ ಮೊತ್ತದ ಮೇಲೆ ಶೇ.10% ಕ್ಕಿಂತ ಹೆಚ್ಚುವರಿಯಾಗದೇ ಸೇವಾ ಶುಲ್ಕವನ್ನು ನೀಡಿ ಟೆಂಡರ್ ಕರೆಯಲು 2018-19 ನೇ ಸಾಲಿನಲ್ಲಿ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.
ಉ)	ಇವರಿಗೆ ಒಂದೇ ರೀತಿ ವೇತನ ನೀಡಿ ಸೇವಾ ಭದ್ರತೆ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)	ಒಂದೇ ರೀತಿ ವೇತನವನ್ನು ಪಾವತಿಸಲು ಸರ್ಕಾರದ ಕಾರ್ಮಿಕ ಇಲಾಖೆಯಿಂದ ಹೊರಡಿಸಲಾದ ಸುತ್ತೋಲೆಯನ್ವಯ ಕ್ರಮ ಕೈಗೊಳ್ಳಲಾಗಿರುತ್ತದೆ.

<u>ಕಡತ ಸಂಖ್ಯೆ: ಕಂಇ 40 ಎಜೆಎಸ್ 2021</u>

(ಆರ್.ಅಶೋಕ)
ಕಂದಾಯ ಸಚಿವರು

ಅನುಬಂಧ-ಎ

ಜಿಲ್ಲೆಯಲ್ಲಿ ನೇಮಿಸಲಾದ ಆಪರೇಟರ್‌ಗಳ ಏಪ್ರಿಲ್-2021 ರಿಂದ ಮಾರ್ಚ್-2022ರ ವೇತನದ ವಿವರ

Sl.No.	Name of Dist	Monthly Rate	No of operators	Already salary paid details
1	2	3	4	5
1	Bagalkote	22,000.00	33	May-21
2	Belagavi	22,000.00	74	Mar-21
3	Ballari	22,000.00	48	May-21
4	Bidar	22,000.00	39	May-21
5	Bangalore Rural	22,000.00	39	May-21
6	Bangalore Urban	22,000.00	41	Mar-21
7	Chamrajnagar	22,000.00	22	Mar-21
8	Chikkaballapura	22,000.00	33	Jun-21
9	Chikkamagaluru	22,000.00	44	Feb-21
10	Chitradurga	22,000.00	31	Jan-21
11	Dakshina Kannada	22,000.00	27	Jun-21
12	Davanagere	22,000.00	32	Mar-21
13	Dharwad	22,000.00	24	May-21
14	Gadag	22,000.00	21	May-21
15	Hassan	22,000.00	49	May-21
16	Haveri	22,000.00	33	Feb-21
17	Kalburgi	22,000.00	48	Oct-20
18	Kodagu	22,000.00	20	Jun-21
19	Kolar	22,000.00	35	Dec-20
20	Koppal	22,000.00	28	Jun-21
21	Mandya	22,000.00	55	Dec-20
22	Mysore	22,000.00	47	Jul-21
23	Raichur	22,000.00	45	Dec-20
24	Ramnagar	22,000.00	23	Jan-21
25	Shimogga	22,000.00	52	Mar-21
26	Tumkur	22,000.00	61	Nov-20
27	Udupi	22,000.00	17	Apr-21
28	Uttar Kannada	22,000.00	52	Feb-21
29	Vijayapura	22,000.00	42	Jan-21
30	Yadgiri	22,000.00	23	Mar-21
	Total		**1121**	